ಅದೇಶ ಹೊರಡಿಸಿ ಬಾಕಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ, Standard document ನ Clause-50.1 ರ ಪ್ರಕಾರ ಬಾಕಿ ಉಳಿದ ಕಾಮಗಾರಿಯ ಮೊತ್ತದ ವ್ಯತ್ಯಾಸವನ್ನು ತಾಳೆ ಹಾಕಿ ಶೇಕಡಾ 30 ರಷ್ಟು ಅಥವಾ ಪರ್ಯಾಯ ಗುತ್ತಿಗೆದಾರರಿಂದ ಕಾಮಗಾರಿ ಪೂರ್ಣಗೊಳಿಸಲು ಬೇಕಾಗುವ ವ್ಯತ್ಯಾಸದ ಹಣವನ್ನು ಮೂಲ ಗುತ್ತಿಗೆದಾರರಿಂದ ಭರಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ನಿಗದಿತ ಅವಧಿಯಲ್ಲಿ ಹಾಗೂ ಅನುಮೋದಿತ ಹೆಚ್ಚಿನ ಅವಧಿಯಲ್ಲಿಯೂ ಸಹ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಗುತ್ತಿಗೆ ದಾರರ ಗುತ್ತಿಗೆಯನ್ನು Standard Tender Document Clause-42.2 ರ ಪ್ರಕಾರ ಮೊಟಕುಗೊಳಿಸಲಾಗುವುದು ಹಾಗೂ ಇವರ ಹಿಂದಿನ ವರ್ಷಗಳ ಕಾರ್ಯನಿರ್ವಹಣೆಯ ಕ್ಷಮತೆಯನ್ನು ಪರಿಗಣಿಸಿ ಇವರು poor performer ಎಂದು ಕಂಡಬಂದಲ್ಲಿ ಮುಂದಿನ 1 ಅಥವಾ 2 ವರ್ಷದ ಅವಧಿಗೆ ಯಾವುದೇ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸದಂತೆ ಕ್ರಮ ಜರುಗಿಸಲಾಗುವುದು.

(ಊ) ಮೇಲ್ಕಂಡ 5 ಜನ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆ ಬೀದರ ಜಿಲ್ಲೆಯಲ್ಲಿ ತಲಾ ಒಂದೊಂದು ಕಾಮಗಾರಿಯನ್ನು ಟೆಂಡರ್ ನಿಯಮಾವಳಿ ಪ್ರಕಾರ ನಿರ್ವಹಿಸುವಲ್ಲಿ ವಿಫಲರಾಗಿದ್ದು, ಇವರುಗಳನ್ನು **"ಕಪ್ಪು ಪಟ್ಟಿಗೆ"** ಸೇರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ನಿಯಮಗಳನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ವನಮಾರಪಳ್ಳಿ ರಾಯಚೂರು ರಸ್ತೆ ಅಭಿವೃದ್ಧಿ

946 (1790); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

(ಅ) ಬೀದರ್ ತಾಲ್ಲೂಕಿನ ವನಮಾರಪಳ್ಳಿ ರಾಯಚೂರು 15 ಕಿಲೋ ಮೀಟರ್ (32.00ಕಿ.ಮೀ. ರಿಂದ 47.00 ವರೆವಿಗೆ) ರಾಜ್ಯ ಹೆದ್ದಾರಿಯ ಕಾಮಗಾರಿಯನ್ನು ಇ–ಟೆಂಡರ್ ಮೂಲಕ ವಹಿಸಿಕೊಂಡಿದ್ದ ಗುತ್ತಿಗೆದಾರರ ಹೆಸರು ವಿವರಗಳೇನು;

(ಆ) ಈ ಕಾಮಗಾರಿಯ ಒಟ್ಟು ಮೊತ್ತವೆಷ್ಟು ಈ ಕಾಮಗಾರಿಯನ್ನು ನಿಗದಿತ ಅವಧಿಗಿಂತ ಮೊದಲೇ ಪೂರ್ಣಗೊಳಿಸಿರುವುದು ನಿಜವೇ; ಈ ಕಾಮಗಾರಿಯ ಉತ್ತಮ ಗುಣಮಟ್ಟದಿಂದ ಕೂಡಿದೆಯೇ;

(ಇ) ಹಾಗಿದ್ದಲ್ಲಿ, ನಿಗದಿತ ಅವಧಿಗಿಂತ ಮೊದಲು ಹಾಗೂ ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರು / ಸಂಸ್ಥೆಗೆ ಲೋಕೋಪಯೋಗಿ ಇಲಾಖೆಯ ಹಿಂದಿನ ಪ್ರಧಾನ ಕಾರ್ಯದರ್ಶಿಗಳು ಪ್ರಶಂಸಾ ಪತ್ರವನ್ನು ನೀಡುವ ಮೂಲಕ ಸದರಿ ಸಂಸ್ಥೆಯನ್ನು ಉತ್ತೇಜಿಸಿರುವುದು ನಿಜವೇ;

(ಈ) ಹಾಗಿದ್ದಲ್ಲಿ, ಪ್ರಶಂಸಾ ಪತ್ರವನ್ನು ಪಡೆದುಕೊಂಡಿರುವ ವ್ಯಕ್ತಿಗಳ / ಸಂಸ್ಥೆಗಳ ಹೆಸರು ವಿವರಗಳೇನು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬೀದರ್ ತಾಲ್ಲೂಕಿನ ವನಮಾರಪಳ್ಳಿ – ರಾಯಚೂರು ರಾಜ್ಯ ಹೆದ್ದಾರಿ–15ರ ಕಿ.ಮೀ. 32.00 ರಿಂದ 47.00ರವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಶ್ರೀ ಗುರುನಾಥ ಕೊಳ್ಳೂರ, 1ನೇ ದರ್ಜೆ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರು, ಜೆ.ಪಿ.ನಗರ ಕಾಲೋನಿ, ಜನವಾಡಾ ರಸ್ತೆ, ಬೀದರ ಇವರಿಗೆ ಇ–ಟೆಂಡರ್ ಮೂಲಕ ಗುತ್ತಿಗೆ ವಹಿಸಿಕೊಡಲಾಗಿರುತ್ತದೆ.

(ಆ) ಈ ಕಾಮಗಾರಿಯ ಅಂದಾಜು ಮೊತ್ತ ರೂ. 410.00 ಲಕ್ಷಗಳಾಗಿದ್ದು, ಗುತ್ತಿಗೆಯ ಮೊತ್ತ ` 432.26 ಲಕ್ಷ ಇರುತ್ತದೆ ಹಾಗೂ ಕಾಮಗಾರಿಯ ಒಟ್ಟಾರೆ ವೆಚ್ಚ `490.41 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಯನ್ನು ದಿನಾಂಕ: 24.02.2010 ರಂದು ಪ್ರಾರಂಭಿಸಲಾಗಿದ್ದು, 9 ತಿಂಗಳ ಅವಧಿ ಅಂದರೆ, ದಿನಾಂಕ:23.11.2010 ಪೂರ್ಣಗೊಳಿಸಬೇಕಾಗಿತ್ತು. ಆದರೆ ಗುತ್ತಿಗೆದಾರರು ನಿಗದಿತ ಅವಧಿಗಿಂತ ಮೊದಲೇ ಅಂದರೆ, ದಿನಾಂಕ: 26.03.2010 ರಂದು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಕಾಮಗಾರಿಯು ಉತ್ತಮ ಗುಣಮಟ್ಟದ್ದಾಗಿದೆ

ಎಂದು ಕಾರ್ಯ ನಿರ್ವಾಹಕ ಇಂಜಿನೀಯರರು, ಬೀದರ್ ಇವರು ವರದಿಸಿರುತ್ತಾರೆ.

(ಇ) ಮೇಲೆ ನಮೂದಿಸಿದ ಕಾಮಗಾರಿಯನ್ನು ನಿಗದಿತ ಅವಧಿಗಿಂತ ಮೊದಲೇ ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಪೂರ್ಣ ಗೊಳಿಸಿದ ಬಗ್ಗೆ ಲೋಕೋಪಯೋಗಿ ಇಲಾಖೆಯ ಹಿಂದಿನ ಪ್ರಧಾನ ಕಾರ್ಯದರ್ಶಿಗಳು ಪ್ರಶಂಸಾ ಪತ್ರವನ್ನು ನೀಡುವ ಮೂಲಕ ಸದರಿ ಸಂಸ್ಥೆಯನ್ನು ಉತ್ತೇಜಿಸಿರುವುದು ನಿಜವೆಂದು ಕಾರ್ಯನಿರ್ವಾಹಕ ಇಂಜಿನಿಯರರು, ಬೀದರ್ ಇವರು ವರದಿಸಿರುತ್ತಾರೆ.

(ಈ) ಶ್ರೀ ಗುರುನಾಥ ಕೊಳ್ಳೂರ, 1ನೇ ದರ್ಜೆ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರು, ಜೆ.ಪಿ.ನಗರ ಕಾಲೋನಿ, ಜನವಾಡಾ ರಸ್ತೆ, ಬೀದರ್.

ಆಲೂಗಡ್ಡೆ ಸಂಶೋಧನಾ ಕೇಂದ್ರ

947 (1656); ಶ್ರೀ ಮಂಜು ಎ (ಅರಕಲಗೂಡು)

(ಅ) ಹಾಸನ ಜಿಲ್ಲೆಯಲ್ಲಿ ಸುಮಾರು 20000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆ ಬೆಳೆಯುತ್ತಿದ್ದು ಸುಮಾರು 2.30 ಲಕ್ಷ ಟನ್ ಪ್ರತಿ ವರ್ಷ ಉತ್ಪಾದನೆಯಾಗುತ್ತಿದ್ದು ಹೆಚ್ಚಿನ ಹೊಸ ಹೊಸ ತಳಿಗಳ ಸಂಶೋಧನೆ ಅವಶ್ಯಕತೆ ಇದೆಯಾದ್ದರಿಂದ ಹಾಗೂ ರೈತರ ಅಭಿವೃದ್ಧಿಗೆ ಪೂರಕವಾಗ ಬೇಕಾದ್ದರಿಂದ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಸಂಶೋಧನಾ ಕೇಂದ್ರದ ಅವಶ್ಯಕತೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರಕ್ಕೆ ಆಲೂಗಡ್ಡೆ ಸಂಶೋಧನಾ ಕೇಂದ್ರ ಸ್ಥಾಪಿಸುವ ಇಚ್ಛೆ ಇದೆಯೇ;

(ಇ) ಹಾಗಿದ್ದಲ್ಲಿ, ಇದಕ್ಕೆ ಕೈಗೊಂಡಿರುವ ಕ್ರಮಗಳೇನು?